**ಸಿ.ಸಿ.ನಂ.: 2526/2025**

ಪಿ.ಡಬ್ಲ್ಯೂ.:1

(ಇಂದು ದಿನಾಂಕಃ **04-02-2026** ರಂದು ಸತ್ಯ ಪ್ರತಿಜ್ಞೆಯ ಮೇರೆಗೆ ಪ್ರಮಾಣ ವಚನ ಬೋಧಿಸಲಾಯಿತು.)

***ಮುಂದುವರಿದ ಪಾಟೀ ಸವಾಲು -ಆರೋಪಿ ಪರ ಶ್ರೀ ವಿ.ಎಸ್.ಎಸ್. ವಕೀಲರಿಂದ***

1. ಆರೋಪಿತನು ನಮಗೆ ನಿಪಿ2 ನ್ನು ಸಾಲದ ವಸೂಲಾತಿಗಾಗಿ ಹೋದಾಗ ನೀಡಿರುತ್ತಾರೆ. ಸದ್ರಿ ಜಾಗವು ಯಾವುದು ಎಂದು ನನಗೆ ಈಗ ನೆನಪಿಗೆ ಬರುತ್ತಿಲ್ಲ. ಆರೋಪಿತನು ನಿಪಿ2 ನ್ನು ನನ್ನ ಸಮ್ಮುಖದಲ್ಲಿ ನೀಡಿರುತ್ತಾನೆ. ನಿಪಿ2 ನ್ನು ಆರೋಪಿತನು ನನಗೆ ನೀಡಿದ ಸಂದರ್ಭದಲ್ಲಿ ನನ್ನ ಜೊತೆ ಯಾರೂ ಇರಲಿಲ್ಲ. ನಿಪಿ 2 ರಲ್ಲಿ ಆರೋಪಿತನು ನಿರ್ದಿಷ್ಟವಾಗಿ ಎಷ್ಟು ಹಣವನ್ನು ಬರೆದಿರುತ್ತಾನೆ ಎಂಬುವುದನ್ನು ನಾನು ದಾಖಲಾತಿಯನ್ನು ನೋಡಿ ಹೇಳಬೇಕಾಗುತ್ತದೆ. ನಿಪಿ 2 ರಲ್ಲಿ ಆರೋಪಿತನು ಯಾವುದೇ ಹಣವನ್ನು ಬರೆಯಲಿಲ್ಲ ಎಂದರೆ ಸರಿಯಲ್ಲ.

2. ಆರೋಪಿತನು ನಿಪಿ 2 ನ್ನು ನೀಡಲಿಲ್ಲ ಎಂದರೆ ಸರಿಯಲ್ಲ. ನಿಪಿ 2 ರ ಸಹಿ ಹಾಗೂ ಅವುಗಳ ಬರವಣಿಗೆಯಲ್ಲಿ ವ್ಯತ್ಯಾಸ ಇದೆ ಎಂದರೆ ಸರಿಯಲ್ಲ. ಆರೋಪಿತನು ನಮ್ಮ ಫಿರ್ಯಾದಿ ಸಂಸ್ಥೆಗೆ ಬಂದು ಯಾವುದೇ ಸಾಲವನ್ನು ಪಡೆಯಲಿಲ್ಲ ಎಂದರೆ ಸರಿಯಲ್ಲ, ಆರೋಪಿತ ವಿರುದ್ಧ ಸುಳ್ಳು ಪ್ರಕರಣವನ್ನು ದಾಖಲಿಸಿದ್ದೇವೆ ಎಂದರೆ ಸರಿಯಲ್ಲ.

**ಮರು ವಿಚಾರಣೆ - ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

ಸಹಿ ಇದೆ.

ಹೆ.ಪ್ರ.ದ.ನ್ಯಾ.ದಂ. ಕುಮಟಾ